इण्डियन ओवरसीज़ बैंक
Indian Overseas Bank
आपकी प्रगति का सच्चा साथी
Good people to grow with

# ಸಾಮಾಜಿಕ ಮಾಧ್ಯಮ ಪ್ರೊಫೈಲ್ ಸುರಕ್ಷತೆಗಾಗಿ ಸಲಹೆಗಳು

- ವಿಳಾಸ, ಫೋನ್ ಸಂಖ್ಯೆ, ಹುಟ್ಟಿದ ದಿನಾಂಕ ಇತ್ಯಾದಿ ನಿಮ್ಮ ಗುರುತಿಸಬಹುದಾದ ವೈಯಕ್ತಿಕ ಮಾಹಿತಿಯನ್ನು ಎಂದಿಗೂ ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಹಂಚಿಕೊಳ್ಳಬೇಡಿ.
- ಸಾಮಾಜಿಕ ಮಾಧ್ಯಮಗಳಲ್ಲಿ ನಿಮ್ಮ ಬಗ್ಗೆ ಕನಿಷ್ಠ ಮಾಹಿತಿಯನ್ನು ದಾಖಲಿಸಿ.
- ನಿಮ್ಮ ಸಾಮಾಜಿಕ ಮಾಧ್ಯಮ ಪ್ರೊಫೈಲ್‌ಗಳಾದ Facebook, Twitter, Instagram ಇತ್ಯಾದಿಗಳನ್ನು ಲಾಕ್ ಮಾಡಿ ಮತ್ತು ಇತರರಿಗೆ ನಿಯಂತ್ರಿತ ಪ್ರವೇಶದ ಅವಕಾಶವನ್ನು ಕಲ್ಪಿಸಿ.
- ಸಾಮಾಜಿಕ ಮಾಧ್ಯಮ ಅಥವಾ ಇತರ ಆನ್‌ಲೈನ್ ವೇದಿಕೆಗಳಲ್ಲಿ ನಿಮ್ಮ ಹಣಕಾಸಿನ ಮಾಹಿತಿಯನ್ನು ಎಂದಿಗೂ ಹಂಚಿಕೊಳ್ಳಬೇಡಿ ಅಥವಾ ಸಂಗ್ರಹಿಸಿಡಬೇಡಿ.

**सूचना सुरक्षा विभाग Information Security Department**
केन्द्रीय कार्यालय 763 अन्ना सलाई चेन्नई - 600002, Central Office 763 Anna Salai, Chennai - 600002

- ನಿಮ್ಮ ಮೂರನೇ ವ್ಯಕ್ತಿಯ ಲಾಗಿನ್ ಅನ್ನು ನಿಯಂತ್ರಿಸಿ - ಬಹುಪಾಲು ಜಾಲತಾಣಗಳು ಮತ್ತು ಅಪ್ಲಿಕೇಶನ್‌ಗಳು ನಿಮಗೆ ಮೊದಲಿನಿಂದ ಹೊಸ ಖಾತೆಯನ್ನು ತೆರೆಯುವ ಪ್ರಕ್ರಿಯೆಯ ಬದಲಿಗೆ ಈಗಾಗಲೇ ಅಸ್ತಿತ್ವದಲ್ಲಿರುವ ನಿಮ್ಮ ಸಾಮಾಜಿಕ ಮಾಧ್ಯಮ ಖಾತೆಯನ್ನು ಬಳಸಿಕೊಂಡು ಲಾಗ್ ಇನ್ ಆಗುವ ಆಯ್ಕೆಯನ್ನು ನೀಡುತ್ತವೆ. ನೀವು ನಿಮ್ಮ ನಿರ್ದಿಷ್ಟ ಖಾತೆಯ ಬಳಕೆಯನ್ನು ನಿಲ್ಲಿಸಿದಾಗ ಈ ಮೂರನೇ ವ್ಯಕ್ತಿಯ ಅಪ್ಲಿಕೇಶನ್ ಗಳಿಗೆ ಮತ್ತು ಜಾಲತಾಣಗಳಿಗೆ ಸಾಮಾಜಿಕ ಮಾಧ್ಯಮ ಖಾತೆಯ ಮೂಲಕ ಲಭ್ಯವಿರುವ ಪ್ರವೇಶವನ್ನು ಅಮಾನ್ಯಮಾಡಲು ಮರೆಯಬೇಡಿ. ನೀವು ದೀರ್ಘ ಕಾಲದಿಂದ ಬಳಸದೇ ಇರುವ ಅಪ್ಲಿಕೇಷನ್ಸ್ ಮತ್ತು ಜಾಲತಾಣಗಳಿಂದ ನಿಮ್ಮ ಸಾಮಾಜಿಕ ಮಾಧ್ಯಮದ ಪುರಾವೆಗಳನ್ನು ತೆಗೆದುಹಾಕಿ.
- ಪ್ರಬಲವಾದ ಪಾಸ್‌ವರ್ಡ್‌ನ್ನು ಆಯ್ಕೆ ಮಾಡಿಕೊಳ್ಳಿ - ಸಮಾಜಿಕ ಮಾಧ್ಯಮ ಖಾತೆಗಳಿಗೆ ಲಾಗ್ ಇನ್ ಮಾಡುವಾಗ ಯಾವಾಗಲೂ ಬಲವಾದ ಪಾಸ್‌ವರ್ಡ್ ಬಳಸಿ.
- ಲಾಗಿನ್ ಅನುಮೋದನೆಗಳನ್ನು ಬಳಸಿ - ಗೂಗಲ್ ಅಕೌಂಟ್, ಫೇಸ್ಬುಕ್ ಅಕೌಂಟ್ ಇತ್ಯಾದಿ ಸಾಮಾಜಿಕ ವೇದಿಕೆಗಳಲ್ಲಿ ಎರೆಡು ಹಂತದ ಧೃಡೀಕರಣವನ್ನಪೇಕ್ಷಿಸುವ ಭದ್ರತಾ ವೈಶಿಷ್ಟ್ಯವು ಲಭ್ಯವಿದ್ದಲ್ಲಿ, ಅಂತಹ ವೈಶಿಷ್ಟ್ಯವನ್ನು ಸಕ್ರಿಯಗೊಳಿಸಿ.

- ಸಾಮಾಜಿಕ ಮಾಧ್ಯಮ ಮತ್ತು ನಿಮ್ಮ ಬ್ಯಾಂಕ್ ಖಾತೆಗೆ ಒಂದೇ ಪಾಸ್‌ವರ್ಡ್ ಅನ್ನು ಬಳಸಬೇಡಿ.
- ಸಾಮಾಜಿಕ ಮಾಧ್ಯಮಗಳಲ್ಲಿ ನಿಮ್ಮ ಗೌಪ್ಯತೆಯ ಸಂಯೋಜನೆಗಳನ್ನು ನಿಯಮಿತವಾಗಿ ಪರಿಶೀಲಿಸಿ ಮತ್ತು ಅವುಗಳ ಅಸ್ಥಿತ್ವವನ್ನು ಖಚಿತಪಡಿಸಿಕೊಳ್ಳಿ.
- ಪೂರ್ವನಿಯೋಜಿತ ಗೌಪ್ಯತಾ ಸಂಯೋಜನೆಗಳನ್ನು ಬಳಸಬೇಡಿ ಮತ್ತು ಅವುಗಳು ನಿಮ್ಮ ಉದ್ದೇಶಗಳಿಗೆ ಪೂರಕವಾಗಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಿ.
- ಯಾವುದೇ ಅಪ್ಲಿಕೇಶನ್‌ಗಳನ್ನು ಡೌನ್‌ಲೋಡ್ ಮಾಡುವಾಗ, ಪ್ರವೇಶಿಸಿದ ಜಾಲತಾಣಗಳು ಸುರಕ್ಷಿತವಾಗಿವೆ (ಬೀಗಮುದ್ರೆ ಹಾಕಿದ ಚಿನ್ಹೆಯನ್ನೊಳಗೊಂಡವೆ ) ಎಂಬುದನ್ನು ಖಚಿತಪಡಿಸಿಕೊಳ್ಳಿ ಮತ್ತು ಇತರ ಜಾಲತಾಣಗಳಿಗೆ ಮರುಪ್ರವೇಶವನ್ನು ಬಯಸಿದಾಗ ಜಾಗೂರಕತೆಯನ್ನು ವಹಿಸಿ.